ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ದಿನಾಂಕ 28.06.2008 ಶ್ರೀಯುತ ಜಸ್ಟೀಸ್ ಗೋಪಾಲಗೌಡರು ಮತ್ತು ಶ್ರೀ ಜಸ್ಟೀಸ್ ರವಿ ಮಲ್ಲಿಮಠ್ ಇವರ ಸಮ್ಮುಖದಲ್ಲಿ

ರಿಟ್ ಪೆಟಿಷನ್ ನಂ. 7107/2008 (ಜೆ.ಎಂ – ಆರ್.ಇ.ಎಸ್)

**ಅರ್ಜಿದಾರರು:**

1. ಎನ್ವೈರನ್ ಮೆಂಟ್ ಸಪೋರ್ಟ್ ಗ್ರೂಪ್, ಇಂಡಿಯನ್ ಪ್ರೆಸ್ ಆಕ್ಟ್ ಅಡಿಯಲ್ಲಿ ರಿಜಿಸ್ಟರ್ ಆಗಿದ್ದ ಟ್ರಸ್ಟ್ ಆರ್.ಇ.ಪಿ.ವೈ ಡಾ॥ ರಾಬರ್ಟ್ ಜಾನ್ ಚಂದ್ರನ್, ಟ್ರಸ್ಟಿ, ಲೇಟ್ ಶ್ರೀ ಜಾನ್ ಚಂದ್ರನ್ ರವರ ಮಗ ನಂ.105, ಈಸ್ಟ್ ಎಂಡ್ 'ಬಿ' ಮುಖ್ಯ ರಸ್ತೆ, ಜಯನಗರ, 9ನೇ ಬ್ಲಾಕ್, ಬೆಂಗಳೂರು 560 069

2. ಶ್ರೀ ಲಿಯೋ ಸಲ್ಡಾನ, ಎಸ್.ಜೆ. ಸಲ್ಡಾನ್ ರವರ ಪುತ್ರ ಮನೆ ನಂ. 1 , ಪರ್ಲ್ ಗಾರ್ಡನ್, ಎನ್. ವಾಜರ ಹಳ್ಳಿ, ಕನಕಪುರ ರಸ್ತೆ, ಬೆಂಗಳೂರು – 560062.

3. ಸಿವಿಕ್, ಬೆಂಗಳೂರು ಇವರ ಸಲುವಾಗಿ ಎಕ್ಸಿಕ್ಯೂಟಿವ್ ಟ್ರಸ್ಟಿಯಾದ ಶ್ರೀಮತಿ ಕಾತ್ಯಾಯನಿ ~~ಸಾಹುರಾಜ್~~ ಚಾಮರಾಜ್, ಡಾ। ಬಿ.ಎನ್.ಲಿಂಗರಾಜುರವರ ಮಗಳು ( 57) ವೈ.ಅಪಾರ್ಟ್ ಮೆಂಟ್, ನಂ.6, 2ನೇ ಮಹಡಿ, ಕಸ್ತೂರಿ ಅಪಾರ್ಟ್ ಮೆಂಟ್, 35/23 (ಹಳೆಯ ನಂ.35/11), ಲಾಂಗ್ ಫೋರ್ಡ್ ರಸ್ತೆ, ಶಾಂತಿ ನಗರ, ಬೆಂಗಳೂರು – 560 025. ಶ್ರೀ ಎಸ್.ಸಿದ್ಧಪ್ಪ ರವರ ಮೂಲಕ

ವರ್ಸಸ್ : (ಪ್ರತಿವಾದಿ)

1. ಕರ್ನಾಟಕ ರಾಜ್ಯ ವಿಧಾನ ಸೌಧ, ಬೆಂಗಳೂರು – 560 001, ಇವರ ಪರವಾಗಿ ಚೀಫ್ ಸೆಕ್ರೆಟರಿ (ಪ್ರಧಾನ ಕಾರ್ಯದರ್ಶಿ)

2. ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್, ಮಲ್ಟಿ ಸ್ಟೋರಿಡ್ ಬಿಲ್ಡಿಂಗ್, ಡಾ। ಅಂಬೇಡ್ಕರ್ ವೀದಿ, ಬೆಂಗಳೂರು – 560001, ಇವರ ಪರವಾಗಿ ಪ್ರಿನಿಸಿಪಲ್ ಸೆಕ್ರೆಟರಿ, ಮುಖ್ಯ ಕಾರ್ಯದರ್ಶಿ.

3. ಡಿಪಾರ್ಟ್ ಮೆಂಟ್ ಆಫ್ ಫಾರೆಸ್ಟ್ ಇಕೊಲಜಿ ಮತ್ತು ಎನ್ವೈರಾನ್ ಮೆಂಟ್, ಮಲ್ಟಿ ಸ್ಟೋರಿಡ್ ಬಿಲ್ಡಿಂಗ್, ಡಾ॥ ಅಂಬೇಡ್ಕರ್ ಬಿಲ್ಡಿಂಗ್ , ಬೆಂಗಳೂರು – 560 001, ಪ್ರಿನಿಸಿಪಲ್ ಸೆಕ್ರೆಟರಿ, ಕಾರ್ಯದರ್ಶಿ.

4. ಡಿಪಾರ್ಟ್ ಮೆಂಟ್ ಆಫ್ ಗೃಹ ಮತ್ತು ಟ್ರಾನ್ಸ್ ಪೋರ್ಟ್, ವಿಧಾನ ಸೌಧ, ಬೆಂಗಳೂರು – 560 001, ಇವರ ಪರವಾಗಿ ಪ್ರಿನಿಸಿಪಲ್ ಸೆಕ್ರೆಟರಿ, ಕಾರ್ಯದರ್ಶಿ.

5. ಬೆಂಗಳೂರು ಮೆಟ್ರೋಪಾಲಿಟನ್ ಲ್ಯಾಂಡ್ ಟ್ರಾನ್ಸ್ ಪೋರ್ಟ್ ಅಥಾರಿಟಿ, ಅರ್ಬನ್ ಲ್ಯಾಂಡ್ ಟ್ರಾನ್ಸ್ ಪೋರ್ಟ್, ಕೊಠಡಿ ನಂ. 340, ವಿಕಾಸ ಸೌಧ, ಬೆಂಗಳೂರು – 560 001, ಇವರ ಪರವಾಗಿ ಮೆಂಬರ್ ಸೆಕ್ರೆಟರಿ.

6. ಡೆಪ್ಯೂಟಿ ಕನ್ಸರ್ವೇಟಿ ಆಫ್ ಫಾರೆಸ್ಟ್ ಮತ್ತು ಟ್ರೀ ಆಫೀಸರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಎನ್.ಆರ್. ವೃತ್ತ, ಬೆಂಗಳೂರು.

7. ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ ಮತ್ತು ಟ್ರೀ ಆಫೀಸರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಎಸ್.ಆರ್. ವೃತ್ತ, ಬೆಂಗಳೂರು.

8. ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್, ಬೆಂಗಳೂರು ಅರ್ಬನ್ ವಿಭಾಗ, ಕರ್ನಾಟಕ ರಾಜ್ಯ ಅರಣ್ಯ ಡಿಪಾರ್ಟ್ ಮೆಂಟ್, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

9. ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ನಿಗಮ 3ನೇ ಮಹಡಿ, ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027, ಇವರ ಪರವಾಗಿ ಅವರ ಮ್ಯಾನೇಜಿಂಗ್ ಡೈರೆಕ್ಟರ್.

10. ಕಮಿಷನರ್ ಆಫ್ ಪೊಲೀಸ್, ಇನ್ ಫೆಂಟ್ರಿ ರಸ್ತೆ, ಬೆಂಗಳೂರು – 560 001.

11. ಡಿಪಾರ್ಟ್ ಮೆಂಟ್ ಆಫ್ ಟೌನ್ ಅಂಡ್ ಪ್ಲಾನಿಂಗ್, ಎಂ.ಎಸ್.ಬಿಲ್ಡಿಂಗ್, ಡಾ। ಅಂಬೇಡ್ಕರ್ ವೀದಿ, ಬೆಂಗಳೂರು – 560 001, ಇವರ ಪರವಾಗಿ ಅವರ ಡೈರೆಕ್ಟರ್.

12. ಬೆಂಗಳೂರು ಡೆವಲೆಪ್ ಮೆಂಟ್ ಅಥಾರಿಟಿ, ಶ್ರೀ ಚೌಡಯ್ಯ ರಸ್ತೆ, ಬೆಂಗಳೂರು– 5600020 ಇವರ ಪರವಾಗಿ ಅವರ ಕಮಿಷನರ್.

13. ಮಿನಿಸ್ಟ್ರಿ ಆಫ್ ಅರ್ಬನ್ ಡೆವಲಪ್ ಮೆಂಟ್, ಕೇಂದ್ರ ಸರ್ಕಾರ, ನಿರ್ಮಾಣ ಭವನ, ನ್ಯೂ ದೆಹಲಿ – 1, ಇವರ ಪರವಾಗಿ ಸೆಕ್ರೆಟರಿ.

14. ಮಿನಿಸ್ಟ್ರಿ ಆಫ್ ಎನ್ ವೈರ್ನಮೆಂಟ್ ಮತ್ತು ಅರಣ್ಯಗಳು, ಪರ್ಯಾಯ ವರ್ಣ ಭವನ, ಸಿ.ಜಿ.ಓ ಕಾಂಪ್ಲೆಕ್ಸ್, ಲೂದಿ ರಸ್ತೆ, ನವದೆಹಲಿ, ಇವರ ಪರವಾಗಿ ಅವರ ಸೆಕ್ರೆಟರಿ.

15. ಡಿಪಾರ್ಟ್ ಮೆಂಟ್ ಆಫ್ ರೋಡ್ ಟ್ರಾನ್ಸ್ ಪೋರ್ಟ್ ಅಂಡ್ ಕೇಂದ್ರ ಶಿಪ್ಪಿಂಗ್ ಮಿನಿಸ್ಟ್ರಿ, ರೋಡ್ ಟ್ರಾನ್ಸ್ ಪೋರ್ಟ್ ಮತ್ತು ಹೈವೇಸ್, ಸಾರಿಗೆ ಭವನ, 1, ಪಾರ್ಲಿಮೆಂಟ್ ರಸ್ತೆ, ನವದೆಹಲಿ, ಇವರ ಪರವಾಗಿ ಸೆಕ್ರೆಟರಿ (ಆರ್.ಟಿ.ಹೆಚ್) (ಶ್ರೀ ಸಿ.ಜಗದೀಶ್, ಆರ್.12ರ ಪರವಾಗಿ, ಮೆಸ್ಸರ್ಸ್ ಅಶೋಕ ಹಾರನಹಳ್ಳಿ ಅಸೋಸಿಯೇಟ್ಸ್ 6 ಮತ್ತು 7 ರ ಪರವಾಗಿ ಶ್ರೀ ಕೃಷ್ಣ ಆರ್.9 ರ ಪರವಾಗಿ)

ಹೀಗಾಗಿ, ಒಂದು ರಿಟ್ ಅರ್ಜಿಯನ್ನು ಮೇಲ್ಕಾಣಿಸಿದ ಅರ್ಜಿದಾರರು ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾ ಆರ್ಟಿಕಲ್ 226ರ ಅಡಿಯಲ್ಲಿ ಸದರಿ ನ್ಯಾಯಾಲಯದಲ್ಲಿ ರಿಜಿಸ್ಟರ್ (ದಾಖಲೆ) ಮಾಡಲಾಗಿದೆ.

ಹಿಯರಿಂಗ್ ಆದ ಮೇಲೆ ಈ ನ್ಯಾಯಾಲಯವು ಕೆಳಕಂಡ ತೀರ್ಪನ್ನು ಕೊಟ್ಟಿದೆ.

ತೀರ್ಪು

ತಾ॥ 28.06.2008ರ ಈ ತೀರ್ಪಿನ ಜೆರಾಕ್ಸ್ ಕಾಪಿಯನ್ನು ಇದರೊಡನೆ ಲಗತ್ತಿಸಲಾಗಿದೆ.

ವಿ.ಜಿ.ಜಿ.ಜೆ ಮತ್ತು ಆರ್.ವಿ.ಎಮ್.ಜೆ

ರಿಟ್ ಪೆಟಿಷನ್ 7107/2008
ದಿನಾಂಕ 28.06.208

ಆಜ್ಞೆ

ಪಾಂಡಿತ್ಯ ಪಡೆದ ವಕೀಲರು ಅರ್ಜಿದಾರರ ಪರವಾಗಿ ಈ ಮೇಲಿನ ವಿಷಯವನ್ನು ತಾತ್ಕಾಲಿಕ ಪರಿಶೀಲನೆಗಾಗಿ ತಾ|| 27.06.2008ರಂದು ಬೇಡಲು, ಅವರ ಬೇಡಿಕೆಯನ್ನು ತಾ||28.06.2008ಕ್ಕೆ ಮುಂದೂಡಲಾಯಿತು.

2. ಶ್ರೀ ಸುನೀಲ್ ದತ್ ಯಾದವ್, ಮೊದಲನೇ ಅರ್ಜಿದಾರರ ಎರಡನೆ ಅರ್ಜಿದಾರರ ಖುದ್ದಾಗಿ ಹಾಜರಿರುವ ಪಾರ್ಟಿಯವರ ವಕೀಲರಾಗಿಯೂ ಮತ್ತು ಪ್ರತಿವಾದಿಗಳ ವಕೀಲರನ್ನು ಕೇಳಿದೆವು.

3. 6ನೇ ಪ್ರತಿವಾದಿಯನ್ನು ಅನೆಕ್ಸ್‌ಚರ್ ಎ.ಆರ್. 1 ರಿಂದ ಎ.ಆರ್.15ರ ಅಡಿಯಲ್ಲಿರುವ ಅಂದರೆ ರಸ್ತೆ ಅಗಲೀಕರಣ ಮಾಡುವ ವಿಚಾರದಲ್ಲಿ ಅನುಮತಿಯನ್ನು ಕೊಡದಂತೆ ತಡೆಯಬೇಕೆಂದು ವಕೀಲರು ಕೇಳಿಕೊಂಡು ಮತ್ತು ಪ್ರತಿವಾದಿಗಳು (ನಂ.6 ಮತ್ತು 7) ಅನೆಕ್ಸ್ ಚರರ ಐ.ಟಿ. 1 ರ ಎಟಿ 17 ರ ಅಡಿಯಲ್ಲಿರುವ ಮರಗಳನ್ನು ಕಡಿಯದಂತೆಯೂ ಬೇಡಲಾಯಿತು. ಅರ್ಜಿದಾರರು ಪ್ರತಿವಾದಿ ನಂ.6 ರ ಬಗ್ಗೆ ಮಾತ್ರ ಮಧ್ಯಂತರ ಆಜ್ಞೆಯನ್ನು ಬೇಡಿದರು. ಬೆಂಗಳೂರು ಸಿಟಿಯು ರಸ್ತೆಗಳನ್ನು ಅಗಲೀಕರಣ ಮಾಡಲು ಮರಗಳನ್ನು ಕಡಿಯುವಂತೆ, 7ನೆಯ ಪ್ರತಿವಾದಿಗಳು ಆಜ್ಞೆ ಹೊರಡಿಸಿದ್ದರಿಂದ, ಅರ್ಜಿದಾರರು ಜನ ಸಾಮಾನ್ಯರ ಅನುಕೂಲಕ್ಕಾಗಿ ಇದನ್ನು ತಡೆಯಲು ಬೇಡಿಕೊಂಡಿದ್ದು, ಸಮಂಜಸವಾದದ್ದು ಮತ್ತು ಸೂಕ್ತವಾದದ್ದು.

4. ಪ್ರತಿವಾದಿ 6ರ ಪರ ವಕೀಲರ ಅರ್ಜಿದಾರರ ವಿರುದ್ಧವಾಗಿ ಮತ್ತು ನ್ಯಾಯಾಲಯದ ಮಧ್ಯಂತರ ಆಜ್ಞೆಯ ವಿರುದ್ಧವಾಗಿ ತಮ್ಮ ಹೇಳಿಕೆಯನ್ನು ಕೊಡಲು ಹೆಚ್ಚಿನ ಸಮಯ ಬೇಕೆಂದು ಬೇಡಲಾಯಿತು. ಅವರು ಅರ್ಜಿದಾರರ ಅರ್ಹತೆ ಮತ್ತು ಅವರು ನಿಜವಾಗಿಯೂ ಜನ ಸಾಮಾನ್ಯರ ಪರವಾಗಿ ಅಲ್ಲದೆ, ಸ್ವಾರ್ಥತೆ ಉಳ್ಳವರು ಎಂದು ಪರಿಶೀಲಿಸುವ ಬಗ್ಗೆ ವಿರೋಧ ವ್ಯಕ್ತ ಪಡಿಸಲು ಮುಂದಾಗುವಂತೆ ಇಚ್ಛಿಸಿದರು. ಈ ಆಜ್ಞೆಯ ವಿರುದ್ಧ ಅಪೀಲ್ ಸಲ್ಲಿಸಲು ಕರ್ನಾಟಕ ಪ್ರಿಸರ್ವೇಷನ್ ಆಫ್ ಟ್ರೀಸ್ ಆಕ್ಟ್ 1976 (ಅಂದರೆ ಕೆ.ಪಿ.ಟಿ.ಆಕ್ಟ್ ಎಂದು), ಅಡಿಯಲ್ಲಿ ಸಾಧ್ಯವಿರುವುದರಿಂದ, ಸದರಿ ಆಜ್ಞೆಯನ್ನು (ತೀರ್ಪನ್ನು) ಕೊಡದಂತೆ ಬೇಡಲಾಯಿತು. ಕರ್ನಾಟಕ ಸರ್ಕಾರ 11.06.2008 ರ ನೋಟಿಫಿಕೇಷನ್ ಅಡಿಯಲ್ಲಿ ಟ್ರೀ ಅಥಾರಿಟಿ ನೇಮಿಸಿದ್ದು ಕೆ.ಪಿ.ಟಿ.ಆಕ್ಟ್ ಸೆಕ್ಷನ್ 3ರ ಅಡಿಯಲ್ಲಿ ಈ ಅಥಾರಿಟಿಗೆ ತೀರ್ಮಾನಕೊಡುವ ಹಕ್ಕಿರುವುದಾಗಿ ತಿಳಿಸಲಾಯಿತು. ಆದ್ದರಿಂದ, ಟ್ರೀ ಆಫೀಸರ್ ಮಾಡಿದ ಆಜ್ಞೆಯನ್ನು ಟ್ರೀ ಅಥಾರಿಟಿ ಈ ಆಕ್ಟಿನ ಪ್ರಕಾರ ತೀರ್ಮಾನಕೊಡಲು ಸಾಧ್ಯವಿದೆ ಎನ್ನಲಾಯಿತು. ಒಂದು ವೇಳೆ ಜನ ಸಾಮಾನ್ಯರ ಹಿತ ದೃಷ್ಟಿಯಿಂದ ಅರ್ಜಿದಾರರು ಮುಂದೆ ಬಂದರೆ, 6ನೆಯ ಪ್ರತಿವಾದಿಗೆ ಮುಖಾ ಮುಖಿಯಾಗಿ ಕುಳಿತು ತಿರ್ಮಾನಕ್ಕೆ ಬರಲು ಅಧಿಕಾರವಿದೆಯೆಂದು ಮತ್ತು ತಮ್ಮ ಅಡ್ಡಿಯಿಲ್ಲ ಎಂದು ತಿಳಿಸಲಾಯಿತು. ನಿವೃತ್ತ ಐ.ಎ.ಎಸ್.ಆಫೀಸರ್ ಶ್ರೀಎಲ್ಲಪ್ಪ ರೆಡ್ಡಿಯವರು ಚೇರ್ ಮನ್ ಆಗಿ ರಚಿಸಿದ ಕಮಿಟಿಯ ಮೂಲಕ, ಪರಿಸರವನ್ನು ಕಾಪಾಡುವ ನಿಟ್ಟಿನಡಿಯಲ್ಲಿ, ಬೆಂಗಳೂರು ಸಿಟಿಯಲ್ಲಿ ರಸ್ತೆಗಳನ್ನು

ಅಗಲೀಕರಿಸುವ ಸಾಧ್ಯತೆ ಇದೆಯೆಂದು ವಾದಿಸಲಾಯಿತು. ಈ ಕಮಿಟಿಯು ಅರ್ಜಿದಾರರು ಸೂಚಿಸಿದ ವಿಷಯಗಳನ್ನು ತೀರ್ಮಾನಿಸಲು ಸಾಧ್ಯವಿದೆಯೆಂದು ವಾದಿಸಿದರು.

5. ಕೆರೆಗಳ ಮಾಲಿನ್ಯತೆಯನ್ನು ಕಾಪಾಡಲು, ಶುದ್ಧ ನೀರನ್ನು ಜನ ಸಾಮಾನ್ಯರಿಗೆ ಒದಗಿಸಲು ಸಾಧ್ಯವಾಗುವಂತೆ, ಈಗಾಗಲೇ ಜಸ್ಟಿಸ್ ಕೆ.ಎಲ್.ಮಂಜುನಾಥ್ ಅವರನ್ನು ಕರ್ನಾಟಕ ಲೀಗಲ್ ಏಡ್ ಕಮಿಟಿಗೆ ಅಧ್ಯಕ್ಷರನ್ನಾಗಿ ನೇಮಿಸಿದ್ದು, ಮೇಲ್ಕಾಣಿಸಿದ ಈ ಎಲ್ಲಾ ವಿಷಯಗಳಿಗೆ ತೀರ್ಪನ್ನು ಈ ಕಮಿಟಿಯೇ ನೀಡಲು ಸಾಧ್ಯವಿದೆಯೆಂದು ಪ್ರತಿವಾದಿ ವಕೀಲರು ವಾದಿಸಿದ್ದಲ್ಲದೆ, ಈ ಎಲ್ಲಾ ವಿಷಯಗಳನ್ನೂ ಅವರೇ ಪರಿಗಣಿಸಿ, ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವಿದೆಯೆಂದರು.

6. ಮೊದಲನೆಯ ಅರ್ಜಿದಾರರ ಪರ ವಕೀಲರು ಮತ್ತು 2ನೆಯ ಅರ್ಜಿದಾರರು ಖುದ್ದಾಗಿ ಹಾಜರಿದ್ದು ವಾದಮಾಡಿ, ಮೇಲೆ ರಚಿಸಿದ ಶ್ರೀಎಲ್ಲಪ್ಪ ರೆಡ್ಡಿಯವರ ಕಮಿಟಿಯಲ್ಲಿ ವಾದಿಗಳ ಪರವಾಗಿ ನಾಲ್ಕು ಜನರನ್ನು ನೇಮಿಸಿದ್ದು ನಗರದ ಬೆಳವಣಿಗೆಗೆ ಸಂಬಂಧಪಟ್ಟ ರಸ್ತೆ ಅಗಲೀಕರಣ ಮತ್ತಿತ್ತರ ವಿಷಯಗಳನ್ನು ತೀರ್ಮಾನಿಸಲು ನಾಲ್ಕು ಹೆಸರುಗಳನ್ನು ನೀಡಲಾಯಿತು. ಅದಲ್ಲದೆ, ಪ್ರತಿವಾದಿಗಳ ಪರವಾಗಿ ಇನ್ನೂ ಮೂರು ಹೆಸರುಗಳನ್ನು ಸೇರಿಸುವಂತೆ, ವಕೀಲರು ಕೇಳಿಕೊಂಡರಲ್ಲದೆ, ವಾದಿಗಳ ಪರ ನೇಮಿಸಿದ ನಾಲ್ಕನೇ ಹೆಸರನ್ನು ಕೈಬಿಡದಂತೆ ಕೇಳಿಕೊಳ್ಳಲಾಯಿತು. ಆದ್ದರಿಂದ ಉಭಯತ್ರ ವಕೀಲರು, ಸಾರ್ವಜನಿಕರ ಮತ್ತು ಅರ್ಜಿದಾರರ ಪರವಾಗಿ ಈ ಕೆಳಕಂಡವರನ್ನು ಕಮಿಟಿಯ ಮೆಂಬರುಗಳಾಗಿ ನೇಮಿಸಲಾಯಿತು.

1. ಡಾ॥ ಸುಬ್ರಾಯನ್ ಪ್ರಸನ್ನ, ಪಿ.ಹೆಚ್.ಡಿ, ನಿವೃತ್ತ ಪ್ರೊಫೆಸರ್ ಮತ್ತು ಡೀನ್ , ಅರ್ಬನ್ ಮತ್ತು ರೀಜನ್ ಪ್ಲಾನಿಂಗ್ , ಇಂಡಿಯನ್ ಇಂಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್.
ಮನೆ ನಂ. 271, 2ನೇ ಹಂತ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು–92.

2. ಡಾ॥ ಶಿರಡಿ ಪ್ರಸಾದ್ ತೇಕೂರ್ , ಕಮ್ಯುನಿಟಿ ಹೆಲ್ತ್ ತಜ್ಞರು (ಮಕ್ಕಳ ತಜ್ಞರು)
ಮನೆ ನಂ.804, ಶ್ರೀನಿವಾಸ, 16ನೇ ಮುಖ್ಯರಸ್ತೆ, 19ನೇ ಅಡ್ಡರಸ್ತೆ, ಬನಶಂಕರಿ 2ನೇ ಘಟ್ಟ,ಬೆಂಗಳೂರು – 560070.

3. ಡಾ॥ ಕರೋಲ್ ಉಪಾಧ್ಯಾಯ, ಪಿ.ಹೆಚ್.ಡಿ.
ಫೆಲೋ ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್. (ಸೋಷಿಯಲ್ ಮಾನವ ವಿಜ್ಞಾನಿ)
ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್, ಬೆಂಗಳೂರು – 560 012.

ಮತ್ತು ಪ್ರತಿವಾದಿ ನಂ.6 ರ ಪರವಾಗಿ ಸೂಚಿಸಿದ ಈ ಕೆಳಗಿನ ಮೂವರು ಯಾರೆಂದರೆ,

1. ಡಾ॥ ಪರಮೇಶ್ವರ್
ಲೇಕ್ ಸೈಡ್ ಆಸ್ಪತ್ರೆ,
ಅಲಸೂರ್ ಲೇಕ್
ಬೆಂಗಳೂರು

2. ಡಾ॥ ಶರ್ಮ
ರಾಮ್‌ಕೀ ಎನ್ರೋ ಇಂಜಿನಿಯರ್ಸ್
ರಾಜಾಜಿನಗರ
ಬೆಂಗಳೂರು

3. ಡಾ॥ ಶೇಖರ್ ಮಧು
ಸಿವಿಲ್ ಇಂಜಿನಿಯರಿಂಗ್ ಡಿಪಾರ್ಟ್ ಮೆಂಟ್
ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್
ಬೆಂಗಳೂರು.

7. ಮಾನ್ಯ ಅಡ್ವೋಕೇಟ್ ಜನರಲ್ ಶ್ರೀ ಉದಯ ಹೊಳ್ಳ, ಪ್ರತಿವಾದಿ 1 ರಿಂದ 3ರ ಪರವಾಗಿ ವಾದಿಸಲಾಗಿ, ಸಾರ್ವಜನಿಕರ ಒಳಿತಿಗಾಗಿ ರಾಜ್ಯ ಮತ್ತು ಪ್ರತಿವಾದಿ ಆಫೀಸರ್ ಗಳು ಸಾರ್ವಜನಿಕರು ಮಾಡಿದ ಯಾವ ಸಲಹೆಗಳನ್ನಾದರೂ ಒಪ್ಪಿಕೊಳ್ಳುವರು. ಆದರೆ, ಆ ಸಲಹೆಗಳು ಕಾನೂನು ಬದ್ಧವಾಗಿದ್ದು ಪ್ರತಿವಾದಿ ನಂ.6 ಅವರು ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಮತ್ತು ನಗರದ ರಸ್ತೆಗಳನ್ನು ಅಗಲೀಕರಣ ಮಾಡಲು ಅಡ್ಡಿಯಾಗದಂತಿರಬೇಕೆಂದರು. ಮೇಲೆ ನೇಮಿಸಿದ ಕಮಿಟಿಯ ವ್ಯಕ್ತಿಗಳ ಉತ್ತಮವಾದ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಜನ ಸಾಮಾನ್ಯರಿಗೆ ಅನುಕೂಲವಾದಂತಹ ಬೆಳವಣಿಗೆಯ ಕೆಲಸಗಳನ್ನು ಮುಂದುವರಿಸುವಂತೆ ಮಾಡಬೇಕೆಂದರು.

8. ಜನತೆಯ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸಲು ನ್ಯಾಯಾಲಯದ ಮುಂದೆ ಉಭಯತ್ರರೂ ಮಂಡಿಸಿದ ಸೂಕ್ತ ಸಲಹೆಗಳು ಅಂಗೀಕರಿಸಲು ಅನುಕೂಲವಾದ್ದಲ್ಲಿ ಅಡ್ವೋಕೇಟ್ ಜನರಲ್ ಮತ್ತು ಪ್ರತಿವಾದಿಗಳು ಸಮಾಧಾನ ಕೊಡುವುದಾಗಿ ತಿಳಿಸಲಾಯಿತು. ನ್ಯಾಯಾಲಯವು ಒಂದು ಕಡೆ ಅಗಲೀಕರಣ ಮಾಡಲು ಮರಗಳನ್ನು ಕಡಿಯುವ ಕೆಲಸವು ಮುಂದುವರೆದರೆ, ಜನರ ಅನುಕಂಪವನ್ನು ಗಣನೆಗೆ ತೆಗೆದುಕೊಂಡರೆ, ಮತ್ತೊಂದುಕಡೆ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಮನಸ್ಸಿನಲ್ಲಿಡಬೇಕಾಗುತ್ತದೆ. ಆದ್ದರಿಂದ, ಇಂತಹ ವಿಷಯಗಳಲ್ಲಿ ಸಮತೋಲನ ಇರಬೇಕು. ಪ್ರತಿವಾದಿ ನಂ.6 ಮೇಲ್ಕಾಣಿಸಿದ ಕಮಿಟಿಯ ಸಲಹೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ, ಜನರ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಜನ ಸಾಮಾನ್ಯರು ಇದರ ಸಲುವಾಗಿ ಏನಾದರೂ ಸೂಕ್ತ ಸಲಹೆಗಳನ್ನು ಮಂಡಿಸಿದರೆ, ಮತ್ತು ಆ ಸಲಹೆಗಳು ಕಾನೂನು ಬದ್ಧವಾಗಿದ್ದು ಕಾನೂನಿನ ಪರವಾಗಿ ಸ್ಥಾಪಿಸಿದ ಅಧಿಕಾರ ವೃಂದಕ್ಕೆ ಸೂಕ್ತವೆನಿಸಿದರೆ, ಅವುಗಳನ್ನು ಅನುಷ್ಠಾನಕ್ಕೆ ತರಬಹುದು. ಆದ್ದರಿಂದ, ಉಭಯ ಪಾರ್ಟಿಗಳು ಒಪ್ಪಿಕೊಂಡ ನಿರ್ಧಾರಗಳು ಸೂಕ್ತವೆನಿಸಿದ್ದರಿಂದ, ನಾವುಗಳು ತಾತ್ಕಾಲಿಕ ಆಜ್ಞೆಯನ್ನು ಕೊಡುವುದು ಸಮಂಜಸವಲ್ಲ. 6ನೆಯ ಪ್ರತಿವಾದಿ ನೇಮಿಸಿದ ಕಮಿಟಿ ಮೆಂಬರುಗಳ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಹಾಗೂ ವಾದಿಗಳ ಸಲಹೆಗಳನ್ನು ಪರಿಶೀಲಿಸಿ ಸೂಕ್ತ ಆಜ್ಞೆಯನ್ನು ಹೊರಡಿಸುವುದು ಒಳ್ಳೆಯದು. ಆದರೆ, ನಗರದ ಉದ್ಧಾರವನ್ನು ಎಲ್ಲರಿಗೂ ಗಮನದಲ್ಲಿರಸಬೇಕಾಗುತ್ತದೆ. ಹಾಗಿದ್ದಲ್ಲಿ ಮಾತ್ರ ರಸ್ತೆಗಳನ್ನು ಅಗಲೀಕರಿಸಲು ಅನುಕೂಲವಾಗುವುದು.

9. ಮೇಲೆ ವಿವರಿಸಿದ ಕಾರಣಗಳನ್ನು ಗಮನದಲ್ಲಿಟ್ಟು ನಾವುಗಳು ಈ ಕೆಳಗಿನ ಆಜ್ಞೆಯನ್ನು ಕೊಡಲಾಗಿದೆ.

ಕರ್ನಾಟಕ ನ್ಯಾಯಾಲಯದ ಲೀಗಲ್ ಏಡ್ ಕಮಿಟಿಯ ಅಧ್ಯಕ್ಷರಾದ ಜಸ್ಟೀಸ್ ಕೆ.ಎಲ್.ಮಂಜುನಾಥ್ ಅವರು ಈ ವಿಷಯವನ್ನು ಕೂಲಂಕುಶವಾಗಿ ಪರಿಗಣಿಸಿ 6ನೆಯ ಪ್ರತಿವಾದಿಗಳಿಗೆ ಸೂಕ್ತ ಆದೇಶಗಳನ್ನು ಕೊಟ್ಟು ಪ್ರಗತಿಪರವಾದ ಕೆಲಸಗಳು ಮುಂದೆ ಹೋಗವಂತೆ ನೋಡಿಕೊಳ್ಳಬೇಕು.

1. 6ನೆಯ ಪ್ರತಿವಾದಿಯು ನೇಮಿಸಿದ ಕಮಿಟಿಯು 2 ಕಡೆಯ ಸಲಹೆಗಳನ್ನು ಪರೀಕ್ಷಿಸಬೇಕು. ಮೇಲ್ಕಾಣಿಸಿದ 6 ಕಮಿಟಿ ಮೆಂಬರುಗಳಲ್ಲದೆ, ಸೂಕ್ತವಾದ ರಾಜ್ಯಾಧಿಕಾರಿಗಳನ್ನು ಒಳಗೊಂಡು ಮರಗಳನ್ನು ಕಡಿಯುವ ವಿಚಾರ ರಸ್ತೆಗಳನ್ನು ಅಗಲೀಕರಣ ಮಾಡುವ ವಿಚಾರ, ಸಸಿಗಳನ್ನು (ನಗರದಲ್ಲಿ) ನೆಡುವ ವಿಚಾರ, ಕರ್ನಾಟಕ ಪ್ರಿಸರ್ವೇಷನ್ ಆಫ್ ಟ್ರೀಸ್ ಆಕ್ಟ್ 1976 ಸೆಕ್ಷನ್ 8/5 ರ ಪ್ರಕಾರ ತೀರ್ಮಾನಿಸತಕ್ಕದ್ದು.

2. ಪೌರಾಡಳಿತ ಒಳಗಿನ ರಸ್ತೆಯ ಅಗಲೀಕರಣ ಮಾಡುವಾಗ ಶ್ರೀ ಎಲ್ಲಪ್ಪ ರೆಡ್ಡಿ ಅವರ ನೇತೃತ್ವದಲ್ಲಿ ರಚಿಸಿದ ಕಮಿಟಿಯ ಸದಸ್ಯರು, ಅರ್ಬನ್ ಏರಿಯಾದಲ್ಲಿ ಇಕಾಲಜಿ ಮತ್ತು ಪರಿಸರದ ಬಗ್ಗೆ ಗಮನದಲ್ಲಿಡಬೇಕು.

3. ಅರ್ಬನ್ ಏರಿಯಾದಲ್ಲಿ ಎಲ್ಲಿ ರಸ್ತೆಗಳನ್ನು ಅಗಲೀಕರಣ ಮಾಡುತ್ತಾರೋ ಮರಗಳನ್ನು ಕಡಿದು ಹಾಕಿ ಪುನಃ ಸಸಿಗಳನ್ನು ನೆಡುತ್ತಾರೋ ಅದರ ಬಗ್ಗೆ ಮಧ್ಯಂತರ ನಿರ್ಣಯಗಳನ್ನು ತೆಗೆದುಕೊಳ್ಳಲು ಎರಡು ಪಕ್ಷದವರು ಕಮಿಟಿಯನ್ನು ಕೇಳಿಕೊಳ್ಳಲು ಸ್ವಾತಂತ್ರ್ಯವಿರುತ್ತದೆ.

4. ಅಂತರ ರಾಷ್ಟ್ರೀಯ ವಿಮಾನವನ್ನು ಸೇರಲಿರುವ ರಸ್ತೆಯನ್ನು ಅಗಲೀಕರಣ ಮಾಡುವಾಗ ಕೇವಲ ಮರಗಳನ್ನು ಕಡಿದು ಉರುಳಿಸುವ ನಿಟ್ಟಿನಲ್ಲಿ ಮಾತ್ರ ಈ ಕಮಿಟಿ ಕೆಲಸ ಮಾಡದೆ ಇನ್ನಿತರ ಸಂಬಂಧಪಡುವ ವಿಷಯಗಳನ್ನು ಗಮನದಲ್ಲಿಟ್ಟು ಸೂಕ್ತ ಪರಿಹಾರವನ್ನು ತೆಗೆದುಕೊಳ್ಳಬೇಕು. ಅಂದರೆ, ವಾಹನಗಳಿಗಾಗುವ (ಸಾರ್ವಜನಿಕ ಮತ್ತು ಖಾಸಗಿ ವಾಹನಗಳಿಗಾಗುವ) ತೊಂದರೆಗಳು ಹಿರಿಯನಾಗರೀಕರಿಗೆ, ಅಂಗವಿಕಲರಿಗೆ, ಮಕ್ಕಳಿಗೆ ಇಕಾಲಜಿ ಪರಿಸರ ಮತ್ತು ಆರೋಗ್ಯದ ಕಡೆ ಗಮನವಿರಿಸಬೇಕು.

ಆದ್ದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ್ ಈ ಮೇಲೆ ನಮೂದಿಸಿದ ವ್ಯಕ್ತಿಗಳು ಪೂರ್ಣಮನಸ್ಸಿನಿಂದ ಕಮಿಟಿ ಮೀಟಿಂಗ್ ಗಳನ್ನು ಕರೆದಾಗ, ಅವುಗಳಲ್ಲಿ ಹಾಜರಿದ್ದು, ಭಾಗವಹಿಸಿ, ಕಾರ್ಯಸಾಧಿತ ಮತ್ತು ತೃಪ್ತಿಕರ ತೀರ್ಮಾನಗಳನ್ನು ತೆಗೆದುಕೊಂಡು ಅರ್ಜಿದಾರರ ಸಮಸ್ಯೆಗಳಿಗೆ ತೃಪ್ತಿಕರ ಪರಿಹಾರವನ್ನು ಕಂಡುಹಿಡಿಯಬೇಕು.

ಸಹಿ, ನ್ಯಾಯಾಧೀಶರು.

ಸಹಿ, ನ್ಯಾಯಾಧೀಶರು

ಯಥಾನಕಲು .ಸಹಿ